**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ</u>**

ಸಿ.ಸಿ.ನಂಬರ್ : 4815/23

ಪಿ.ಡಬ್ಲ್ಯೂ : 9 ಸಿ.ಡಬ್ಲ್ಯೂ 7

| | |
|---|---|
| ಸಾಕ್ಷಿದಾರರ ಹೆಸರು | : ಸಿದ್ದಾರಾಮ |
| ತಂದೆಯ ಹೆಸರು | : ಹಣಮಂತ ಇಂಡಿ |
| ವಯಸ್ಸು | : 43 ವರ್ಷ |
| ಉದ್ಯೋಗ | : ಪೋಲಿಸ್ ಮುಖ್ಯ ಪೇದೆ |
| ವಾಸಸ್ಥಳ | : ದೇವರ ಹಿಪ್ಪರಗಿ |
| ಸಮಯ | : 12.45 |

<u>ಸಾಕ್ಷಿಗೆ ಇಂದು ದಿನಾಂಕಃ 05-06-2026 ರಂದು ಪ್ರಮಾಣೀಕರಿಸಲಾಯಿತು.</u>

**<u>ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ</u>**

ನಾನು 2021 ರಿಂದ ಇಲ್ಲಿಯವರೆಗೆ ನಾನು ದೇವರ ಹಿಪ್ಪರಗಿ ಠಾಣೆಯಲ್ಲಿ ನಾನು ಪೋಲಿಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 20-07-2023 ರಂದು ನಾನು ಬೆಳಿಗ್ಗೆ 9.30 ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾ ಸಾ 1 ರವರು ಠಾಣೆಗೆ ಹಾಜರಾಗಿ ಸದರಿಯವರು ದಾಳಿಯ ಕುರಿತು ದೂರನ್ನು ಹಾಗೂ ಪಂಚನಾಮೆ ಸಲ್ಲಿಸಿದ್ದು ಸದರಿಯವರ ದೂರಿನ ಆಧಾರದ ಮೇಲೆ ನಮ್ಮ ಠಾಣಾ ಗುನ್ನಾ ಸಂಖ್ಯೆ 113/23 ರಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರ. ವ. ವರದಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ. ಚಾ ಸಾ 1 ರವರು ದೂರಿನೊಂದಿಗೆ ಜಪ್ತಿ ಮಾಡಿಕೊಂಡ ಮು ಮಾ ಹಾಜರುಪಡಿಸಿರುತ್ತಾರೆ. ಆರೋಪಿ ಸ್ಥಳದಿಂದ ಓಡಿ ಹೋಗಿದ್ದಾಗಿ ತಿಳಿಸಿರುತ್ತಾರೆ.

ಸಾಕ್ಷಿ ನಿಪಿ 2 ನ್ನು ಹಾಗೂ ಅದರಲ್ಲಿರುವ ತಮ್ಮ ಸಹಿ ನೋಡಿ ಗುರುತಿಸಿದ್ದುಅದನ್ನು ನಿಪಿ 2 ಬಿ ಎಂದು ಗುರುತಿಸಲಾಯಿತು. ಪ್ರ.ವ. ವರದಿಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು.

ಅದೇ ದಿನ ನಾನು ಚಾ ಸಾ 1 ರವರು ಹಾಜರು ಮಾಡಿದ ಮು ಮಾ ಗಳಿಗೆ ಸಂಬಂಧಿಸಿದಂತೆ ಸ್ವತ್ತು ಪಟ್ಟಿ ನಂಬರ 72/23 ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದೇ ದಿನ ಚಾ ಸಾ 4 ರಿಂದ 6 ರವರ ಹೇಳಿಕೆ ಪಡೆದಿರುತ್ತೇನೆ. ದಿ 28-07-2023 ರಂದು ಚಾ ಸಾ 1 ರವರು ಜಪ್ತಿ ಮಾಡಿಕೊಂಡು ಹಾಜರು ಮಾಡಿದ ಮು ಮಾ ರಾಸಾಯನಿಕ ಪರೀಕ್ಷೆಗಾಗಿ ಬೆಳಗಾವಿಗೆ ಕಳುಹಿಸಿರುತ್ತೇನೆ. ಸದರಿಯವರು ನೀಡಿರುವ ಹಿಂಬರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿ 07-09-23 ರಂದು ಆರೋಪಿ ಮಾನ್ಯ ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಠಾಣೆಗೆ ಹಾಜರಾದಂತೆ ಆತನ ವಿರುದ್ಧ ದಸ್ತಗೀರ ಕ್ರಮ ಅನುಸರಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ದಿನಾಂಕ 29-09-2023 ರಂದು ಎಫ್ ಎಸ್ ಎಲ್ ವರದಿ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ದಾಖಲಾತಿ ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು, ಸಾಕ್ಷಿಯ ಸಹಿ ನಿಪಿ 4 ಎ ಎಂದು ಗುರುತಿಸಲಾಯಿತು.

ದಿ 06-10-2023 ರಂದು ಡೆಪ್ಯೂಟಿ ಕಮಿಷನರ ವಿಜಯಪುರ ಉಳಿದ ಮು ಮಾ ದಿನಾಂಕ 30-10-23 ರಂದು ಅಬಕಾರಿ ನೀರಿಕ್ಷಕರು ಸಿಂದಗಿ ಇವರಿಗೆ ಹಸ್ತಾಂತರಿಸಿರುತ್ತೇನೆ. ಸಾಕ್ಷಿ ಸದರಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಮತ್ತು 6, ಸಾಕ್ಷಿಯ ಸಹಿ ನಿಪಿ 6 ಎ ಎಂದು ಗುರುತಿಸಲಾಯಿತು. ದಿ 06-11-2023 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ಸಾಕ್ಷ್ಯಾಧಾರಗಳು ಕಂಡು ಬಂದಿದ್ದು ದೋಷರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ಮು ಮಾ ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು ಮಾ 1 ಎಂದು ಗುರುತಿಸಲಾಗಿದೆ. ಸಾಕ್ಷಿ ಸದರಿ ಮು ಮಾ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್ ಎಸ್ ಎಸ್ ವಕೀಲರಿಂದ**

ಸಾಕ್ಷಿಗೆ ಘಟನಾ ಜಾಗಕ್ಕೆ ಭೇಟಿ ನೀಡಿರುತ್ತಿರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ದಾಳಿಯ ಸಂದರ್ಭದಲ್ಲಿ ಸ್ಥಳದಲ್ಲಿ ಜನರು ಇದ್ದ ಬಗ್ಗೆ ಚಾ ಸಾ 1 ರವರನ್ನು ವಿಚಾರಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿದಿರುತ್ತಾರೆ. ಸದರಿಯವರು ಸಹ ಆ ವಿಷಯವಾಗಿ ಏನನ್ನು ಹೇಳಿರುವುದಿಲ್ಲ. ಚಾ ಸಾ 4 ರಿಂದ 6 ರವರ ಹೇಳಿಕೆ ಠಾಣೆಯಲ್ಲಿ ಮದ್ಯಾಹ್ನ 12 ಗಂಟೆಗೆ ಪಡೆದಿರುತ್ತೇನೆ.

ನ್ಯಾಯಾಲಯಕ್ಕೆ ಹಾಜರುಪಡಿಸಿದ ಮು ಮಾ ಹೊರತುಪಡಿಸಿ ಇತರೆ ಜಪ್ತಿ ಮಾಡಿಕೊಂಡ ಮು ಮಾ ಮದ್ಯ ಇರುವ ಕುರಿತು ಏನಾದರೂ ತಜ್ಞರ ಅಭಿಪ್ರಾಯ ವರದಿ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಾನು ಚಾ ಸಾ 1 ರವರ ದೂರಿನ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡ ನಂತರ ಚಾ ಸಾ 4 ರಿಂದ 6 ರವರ ಹೇಳಿಕೆ ದಾಖಲಿಸಿಕೊಂಡು

ಹಾಜರುಪಡಿಸಿದ ಮು ಮಾ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿ ವರದಿ ಪಡೆದಿರುತ್ತೇನೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದೋಷಾರೋಪಣೆ ಪಟ್ಟಿಯೆಂದಿಗೆ ಸಲ್ಲಿಸಿರುವ ಎಲ್ಲಾ ದಾಖಲಾತಿಗಳನ್ನು ಆರೋಪಿಯ ವಿರುದ್ಧ ಸೃಷ್ಟಿ ಮಾಡಿ ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಪ್ರಸ್ತೂತ ಪ್ರಕರಣದಲ್ಲಿ ನಮ್ಮ ಇಲಾಖಾ ಸಿಬ್ಬಂದಿ ಹೊರತುಪಡಿಸಿ ಪ್ರತ್ಯೇಕ ಸಾಕ್ಷಿದಾರರು ಇರುವುದಿಲ್ಲ ಎಂದರೆ ಸರಿ. ಮು ಮಾ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯ ಅಂಕಿ ಅಂಶಗಳನ್ನು ತೋರಿಸುವ ಸಲುವಾಗಿ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.